# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 630 (662) |
| ಸದಸ್ಯರ ಹೆಸರು | : | ಶ್ರೀ ಎಂ.ಜಿ. ಮುಳೆ<br>(ವಿಧಾನಸಭೆಯಿಂದ ಚುನಾಯಿತರಾದವರು) |
| ಉತ್ತರಿಸುವ ದಿನಾಂಕ | : | 21.08.2026 |
| ಉತ್ತರಿಸುವ ಸಚಿವರು | : | ಮಾನ್ಯ ಜಲಸಂಪನ್ಮೂಲ ಸಚಿವರು |

| ಕ್ರ. ಸಂ. | ಪ್ರಶ್ನೆಗಳು | ಉತ್ತರಗಳು |
|---|---|---|
| ಅ) | ಉತ್ತರ ಕರ್ನಾಟಕದ ಜೀವನಾಡಿಯಾದ ಮಹದಾಯಿ ಮತ್ತು ಕಳಸಾ-ಬಂಡೂರಿ ಯೋಜನೆಗಳಿಗೆ ಕೇಂದ್ರ ಸರ್ಕಾರದ ಅಗತ್ಯ ಅನುಮತಿಗಳಿಂದ ವಿಳಂಬವಾಗಿ ಯೋಜನೆ ನೆನೆಗುದಿಗೆ ಬಿದ್ದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | ಬಂದಿದೆ. |
| ಆ) | ಸಿಡಬ್ಲೂಸಿ (CWC) ಅನುಮೋದನೆ ದೊರೆತಿದ್ದರೂ, ಕೇಂದ್ರ ಪರಿಸರ ಮತ್ತು ಅರಣ್ಯ ಸಚಿವಾಲಯದಿಂದ (MoEFCC) ಸಿಗಬೇಕಾದ ಪರಿಸರ ಹಾಗೂ ಅರಣ್ಯ ಅನುಮತಿಗಳು ಪ್ರಸ್ತುತ ಯಾವ ಹಂತದಲ್ಲಿ ಬಾಕಿ ಇವೆ; | ಮಾನ್ಯ ಮಹಾದಾಯಿ ನ್ಯಾಯಾಧೀಕರಣದ ತೀರ್ಪಿನನ್ವಯ Clause VIII ರಡಿ ಕರ್ನಾಟಕ ರಾಜ್ಯವು ಶಾಸನಬದ್ಧ ಅನುಮೋದನೆಗಳನ್ನು ಕೇಂದ್ರ ಸರ್ಕಾರದಿಂದ ಪಡೆದ ನಂತರವೇ ಕಳಸಾ ಹಾಗೂ ಬಂಡೂರಿ ನಾಲಾ ತಿರುವು ಯೋಜನೆಗಳನ್ನು ಕಾರ್ಯಗತಗೊಳಿಸಬಹುದೆಂದು ನಿಬಂಧನೆ ಇರುತ್ತದೆ.<br><br>**ಕೇಂದ್ರ ಜಲ ಆಯೋಗ(CWC) ದ ತೀರುವಳಿ:** ಕಳಸಾ ಬಂಡೂರಿ ನೀರಾವರಿ ಯೋಜನೆಗಳನ್ನು ಅನುಷ್ಠಾನಗೊಳಿಸಲು ಕೇಂದ್ರ ಜಲ ಆಯೋಗದಿಂದ ದಿನಾಂಕ:29.12.2022 ರಂದು ವಿವರವಾದ ಯೋಜನಾ ವರದಿಗಳಿಗೆ ಅನುಮೋದನೆ ಪಡೆಯಲಾಗಿದೆ.<br><br>**ಪರಿಸರ ಅನುಮತಿ:** ಇದು ಕುಡಿಯುವ ನೀರಿನ ಯೋಜನೆಯಾಗಿರುವುದರಿಂದ ಈ ಯೋಜನೆಗೆ ಪರಿಸರ ಅನುಮತಿ ಅಗತ್ಯವಿರುವುದಿಲ್ಲ. ಈ ಕುರಿತು ಕೇಂದ್ರ ಪರಿಸರ, ಅರಣ್ಯ ಮತ್ತು ಹವಾಮಾನ ಬದಲಾವಣೆ ಸಚಿವಾಲಯವು ದಿನಾಂಕ:17.10.2019 ರಂದು ಸ್ಪಷ್ಟೀಕರಣ ಪತ್ರವನ್ನು ನೀಡಿರುತ್ತದೆ.<br><br>**ಅರಣ್ಯ ಮತ್ತು ವನ್ಯಜೀವಿ ತೀರುವಳಿ:**<br><br>**I. ಕಳಸಾ ನಾಲಾ ತಿರುವು ಯೋಜನೆ:**<br><br>• **ಅರಣ್ಯ ತೀರುವಳಿಗೆ** ಅಗತ್ಯ ವಿರುವ ಒಟ್ಟು ಅರಣ್ಯ ಪ್ರದೇಶ 26.925 ಹೆಕ್ಟೇರ್ ಅರಣ್ಯ ಪ್ರದೇಶ ತೆರವುಗೊಳಿಸುವ ಪ್ರಸ್ತಾವನೆಯನ್ನು ದಿನಾಂಕ: 23.06.2022 ರಂದು ಸಲ್ಲಿಸಿದ್ದು, ಈ ಕುರಿತು ಪ್ರಾದೇಶಿಕ ಉನ್ನತಾಧಿಕಾರ ಸಮಿತಿ, ಕೇಂದ್ರ ಪರಿಸರ, ಅರಣ್ಯ ಮತ್ತು ಹವಾಮಾನ ಬದಲಾವಣೆ ಸಚಿವಾಲಯ, ಬೆಂಗಳೂರು ದಿನಾಂಕ: 20.01.2023 ರಂದು ನಡೆದ ಸಭೆಯ |

| ಕ್ರ. ಸಂ. | ಪ್ರಶ್ನೆಗಳು | ಉತ್ತರಗಳು |
|---|---|---|
| (ಇ) | ಕೇಂದ್ರದಿಂದ ಅನುಮತಿ ದೊರೆತ ತಕ್ಷಣ ಕಾಮಗಾರಿ ಆರಂಭಿಸಲು ಜಲಸಂಪನ್ಮೂಲ ಇಲಾಖೆ ಮಾಡಿಕೊಂಡಿರುವ ಪೂರ್ವಭಾವಿ ಸಿದ್ಧತೆಗಳೇನು ಹಾಗೂ ಅನುಮತಿಗಳನ್ನು ಶೀಘ್ರವಾಗಿ ಪಡೆಯಲು ಕೇಂದ್ರದ ಮೇಲೆ ತಂದಿರುವ ಒತ್ತಡವೇನು? | ಮೂಲಕ ಈಗಾಗಲೇ ತೀರುವಳಿಗಾಗಿ ಸಲ್ಲಿಸಿರುವ ಪ್ರಸ್ತಾವನೆಯಲ್ಲಿ ಸುಮಾರು 10.685 ಹೆಕ್ಟೇರ್ ಪ್ರದೇಶವು ಟೈಗರ್ ಕಾರಿಡಾರ್ ಪ್ರದೇಶದಲ್ಲಿರುವ ಕಾರಣ ಕೇಂದ್ರ ವನ್ಯ ಜೀವಿ ಮಂಡಳಿಯಿಂದ (NBWL) ವನ್ಯ ಜೀವಿ ತೀರುವಳಿ ಪಡೆಯಲು ಅರ್ಜಿ ಸಲ್ಲಿಸುವಂತೆ ನಿರ್ದೇಶಿಸಿರುತ್ತದೆ.<br>• **ವನ್ಯಜೀವಿ ತೀರುವಳಿಗೆ** ಸಂಬಂಧಿಸಿದಂತೆ ದಿನಾಂಕ:23.06.2026 ರಂದು ಕೇಂದ್ರ ಅರಣ್ಯ ಮಂತ್ರಾಲಯವು ಪ್ರಸ್ತಾವನೆಯನ್ನು ಹಿಂದಿರುಗಿಸಿದ್ದು, ಪರಿವೇಶ್ ಪೋರ್ಟಲ್ ಮುಖಾಂತರ ನೀಡಿರುವ ಆಕ್ಷೇಪಣೆಗಳಿಗೆ ಕಾನೂನು ತಂಡದ ಸಲಹೆ/ಅಭಿಪ್ರಾಯ ಅವಶ್ಯವಿದ್ದು, ಸಮಾಲೋಚಿಸಿ ಪಾಲನಾ ವರದಿ ತಯಾರಿಸಲು ಕ್ರಮ ವಹಿಸಲಾಗುತ್ತಿದೆ.<br>**II. ಬಂಡೂರಾ ನಾಲಾ ತಿರುವು ಯೋಜನೆ:**<br>• **ಅರಣ್ಯ ತೀರುವಳಿಗೆ** ಸಂಬಂಧಿಸಿದಂತೆ ದಿನಾಂಕ:13.07.2026 ರಂದು ಕೇಂದ್ರ ಸರ್ಕಾರವು ನೀಡಿರುವ ಆಕ್ಷೇಪಣೆಗಳಿಗೆ ಕಾನೂನು ತಂಡದ ಸಲಹೆ/ಅಭಿಪ್ರಾಯ ಅವಶ್ಯವಿದ್ದು, ಸಮಾಲೋಚಿಸಿ ಪಾಲನಾ ವರದಿ ತಯಾರಿಸಲು ಕ್ರಮ ವಹಿಸಲಾಗುತ್ತಿದೆ.<br>ಈ ಯೋಜನೆಯನ್ನು ಶೀಘ್ರವಾಗಿ ಅನುಷ್ಠಾನಗೊಳಿಸುವ ನಿಟ್ಟಿನಲ್ಲಿ ಅಗತ್ಯ ತೀರುವಳಿ ಪಡೆಯಲು ನಿರಂತರವಾಗಿ ಕೇಂದ್ರ ಸರ್ಕಾರದೊಂದಿಗೆ ಅನುಸರಣೆ ಮಾಡಲಾಗುತ್ತಿದೆ.<br>ಮುಂದುವರೆದು, ಸನ್ಮಾನ್ಯ ಮುಖ್ಯಮಂತ್ರಿಯವರು ಖುದ್ದಾಗಿ ಸನ್ಮಾನ್ಯ ಪ್ರಧಾನಮಂತ್ರಿಗಳು, ಭಾರತ ಸರ್ಕಾರ ಹಾಗೂ ಮಾನ್ಯ ಕೇಂದ್ರ ಅರಣ್ಯ ಸಚಿವರನ್ನು ಭೇಟಿ ಮಾಡಿ ಶೀಘ್ರವಾಗಿ ಶಾಸನಬದ್ಧ ತೀರುವಳಿಗಳನ್ನು ನೀಡುವಂತೆ ಕೋರಲಾಗಿದೆ.<br>ಸಕ್ಷಮ ಪ್ರಾಧಿಕಾರಗಳ ಅನುಮೋದನೆ ಪಡೆದು, ಕಾಮಗಾರಿಗಳನ್ನು ಭೌತಿಕವಾಗಿ ಪ್ರಾರಂಭಿಸಲಾಗುವುದು. |

ಸಂಖ್ಯೆ:ಜಸಂಇ 73 ಡಬ್ಲ್ಯೂಬಿಎಂ 2026

(ಎನ್. ಚಲುವರಾಯಸ್ವಾಮಿ)
**ಜಲಸಂಪನ್ಮೂಲ ಸಚಿವರು**